<u>ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ</u>

ಸಿ.ಸಿ. ನಂ.1238-2025

ಸಿಡಬ್ಲ್ಯೂ -4 ಪಿಡಬ್ಲ್ಯೂ -4

| | | |
|---|---|---|
| ಸಾಕ್ಷಿಯ ಹೆಸರು | - | ಪ್ರತಾಪರೆಟಟಿ |
| ತಂದೆ ಹೆಸರು | - | ನಾಗರೆಡ್ಡಿ |
| ವಯಸ್ಸು | - | 49 ವರ್ಷ |
| ಉದ್ಯೋಗ | - | ಮುಖ್ಯ ಪೇದೆ |
| ವಾಸ | - | ಹಳ್ಳಿಖೇಡ(ಬಿ) ಪೋಲಿಸ್ ಠಾಣೆ. |

ದಿನಾಂಕಃ 01-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

ನಾನು 2021 ರಿಂದ ಇಲ್ಲಿಯವರೆಗೆ ಹಳ್ಳಿಖೇಡ(ಬಿ) ಠಾಣೆಯಲ್ಲಿ ಮುಖ್ಯಪೇದೆ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 23.01.2025 ರಂದು ಸಾಯಂಕಾಲ 4.50 ಗಂಟೆಗೆ ನಾನು ಠಾಣೆ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ನಮಗೆ ಅಲ್ಲೂರ ಗ್ರಾಮದ ಹತ್ತಿರ ರೈಲ್ವೇ ಬ್ರಿಡ್ಜ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅನಧೀಕೃತವಾಗಿ ಸಾರಾಯಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆ ಎಂಬ ಬಾತ್ಮಿ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ದಾಳಿಯ ಬಗ್ಗೆ ತಿಳಿಸಿ ಅವರು ಒಪ್ಪಿದ ಮೇರೆಗೆ ನಾನು ಹಾಗೂ ಸಿಬ್ಬಂದಿಗಳಾದ ಚಾಸಾ.1 ರಿಂದ 3,5 ಹಾಗೂ 6 ರವರು ಸೇರಿ ನಮ್ಮ ಇಲಾಖಾ ಜೀಪ ಸಂ.ಕೆಎ 38/ಜಿ-372 ನೇದ್ದರಲ್ಲಿ ಠಾಣೆಯನ್ನು 5.15 ಗಂಟೆಗೆ ಬಿಟ್ಟು 5.30 ಗಂಟೆಗೆ ಘಟನಾ ಸ್ಥಳದ ಹತ್ತಿರ ಹೋಗಿ ಮರೆಮಾಚಿ ನೋಡಲಾಗಿ ಅಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುವುದು ಖಚಿತ ಪಡಿಸಿಕೊಂಡು ನಾವೆಲ್ಲರೂ ದಾಳಿ ಮಾಡಿ ಹಿಡಿದು ವಿಚಾರಿಸಲಾಗಿ ಆತನ ಹೆಸರು ಪ್ರಕಾಶ ತಂದೆ ನರಸಪ್ಪ ಮೇತ್ರೆ ಎಂದು ತಿಳಿಸಿರುತ್ತಾನೆ.

ನಂತರ ಸದರಿ ವ್ಯಕ್ತಿಯ ಕೈಯಲ್ಲಿ ಚೀಲದ ಬಗ್ಗೆ ವಿಚಾರಿಸಲಾಗಿ ಅದರಲ್ಲಿ 180 ಎಂ.ಎಲ್.ನ ವುಳ್ಳ 5 ಓ.ಟಿ. ವಿಸ್ಕಿ ಬಾಟಲಗಳು, 180 ಎಂ.ಎಲ್.ನ ವುಳ್ಳ 1 ಬ್ಯಾಗ ಪೇಪರ ವಿಸ್ಕಿ ಬಾಟಲ, 180 ಎಂ.ಎಲ್.ನ ವುಳ್ಳ 2 ಓ.ಸಿ. ವಿಸ್ಕಿ ಬಾಟಲಗಳು, 90 ಎಂ.ಎಲ್.ನ ವುಳ್ಳ 42 ಓ.ಟಿ. ವಿಸ್ಕಿ ಪ್ಯಾಕೇಟಗಳು & ಒಂದು ಕಪ್ಪು ಬಣ್ಣದ ಪ್ಲಾಸ್ಟೀಕ ಚೀಲನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ.

ತುಂಬಿದ ಬಾಟಲಗಳು ಕಂಡು ಬಂದವು. ಚಾಸಾ-1 ರವರು ಮಾರಾಟ ಮಾಡಲು ನಿನ್ನ ಹತ್ತಿರ ಪರವಾನಿಗೆ ಕೇಳಲಾಗಿ ಆತನು ಇಲ್ಲ ಎಂದು ತಿಳಿಸಿರುತ್ತಾನೆ.

ನಂತರ ಆತನಲ್ಲಿದ್ದ ಪ್ಲಾಸ್ಟಿಕ ಬಿಳಿ ಚೀಲವನ್ನು ತೆಗೆದು ನೋಡಲಾಗಿ ಸದರಿ ಅವುಗಳನ್ನು ಪಂಚರ ಸಮಕ್ಷಮ 5.30 ರಿಂದ 6.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಜಪ್ತಿ ಪಂಡಿಸಿಕೊಂಡಿರುತ್ತಾರೆ. ನಂತರ ಜಪ್ತಿ ಪಡಿಸಕೊಂಡ ಮು.ಮಾ.ಗಳನ್ನು ರಾಸಾಯನಿಕ ಪರೀಕ್ಷೆಗಾಗಿ 4 ಬಿಳಿ ಬಟ್ಟೆಯಲ್ಲಿ ಹಾಕಿ ಹೊಲೆದು ಅದರ ಮೇಲೆ ಐ.ಬಿ.ಐ. ಎಂದು ಸೀಲ್ ಹಾಕಿ ನನ್ನ ಹಾಗೂ ಪಂಚರ ಚೀಟಿಯನ್ನು ಲಗ್ತತ್ತಿಸಿರುತ್ತೇವೆ. ಪಂಚನಾಮೆ ಕಾಲಕ್ಕೆ ಒಂದು ಭಾವಚಿತ್ರ ವನ್ನು ತೆಗೆದಿರುತ್ತಾರೆ

ನಂತರ ಆರೋಪಿ, ಮು.ಮಾ, ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಆರೋಪಿ ವಿರುದ್ಧ ಚಾಸಾ-1 ರವರು ದೂರು ನೀಡಿರುತ್ತಾರೆ. ನಾನು ಮರುದಿನ ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ಆರೋಪಿತರನ್ನು ಮತ್ತು ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು: ಶ್ರೀ.ಕೆ.ವಿ.ಪಿ. ಆರೋಪಿತರ ಪರ ವಕೀಲರಿಂದ:</u>

ಆ ದಿನ ನಾವು ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾವು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಮುದ್ದೆ ಮಾಲು ಜಪ್ತಿ ಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಂಕಿಸಂಖ್ಯೆಗೋಸ್ಕರ್ ಯಾವುದೆ ದಾಳಿ ಮಾಡದೆ ಆರೋಪಿ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ವಿಲೇವಾರಿಯಾಗದೆ ಇರುವ ಮು.ಮಾ.ನ್ನು ವಿಲೇವಾರಿ ಮಾಡುವ ಉದ್ದೇಶಕ್ಕಾಗಿ ಆರೋಪಿ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಭಾವಚಿತ್ರ ತೆಗೆದಿಲ್ಲ ಎಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.